## ನವಿಲು ಗರಿಯ ಧ್ಯಾನ ಮಂದಿರ

ತುಮಕೂರಿನ ಬಸ್ತಿ ಬೆಟ್ಟ, ಪಂಡಿತರ ಬೆಟ್ಟ ಎಂದು ಕರೆಯುವ ಮಂದರಗಿರಿಯು ಪುರಾತನ ಜೈನ ಬಸದಿಗಳನ್ನು ಹೊಂದಿದೆ. ಚಿತ್ರದಲ್ಲಿ ಕಾಣುತ್ತಿರುವ ನವಿಲುಗರಿಯ ಮಂದಿರ ಇರುವುದು ಇಲ್ಲಿಯೇ. 81 ಅಡಿ ಎತ್ತರದ ಚಿತ್ತಾಕರ್ಷಕವಾದ ನವಿಲುಗರಿಯ ಬೀಸಣಿಗೆಯ ಆಕಾರದ ಈ ಧ್ಯಾನ ಮಂದಿರವು ಅದ್ಭುತ ರಚನೆಯಾಗಿದೆ. ಇದು ದಿಗಂಬರ ಜೈನ ಚಕ್ರವರ್ತಿ ಶಾಂತಿಸಾಗರ ಇವರಿಗೆ ಸಮರ್ಪಿತವಾದ ಮಂದಿರವಾಗಿದ್ದು ಇಲ್ಲಿ ಜೈನ ತೀರ್ಥಂಕರರ ದಿನನಿತ್ಯದ ಜೀವನ ಶೈಲಿಯ ಚಿತ್ರಗಳನ್ನು ಪ್ರತಿಮೆಯ ಇಕ್ಕೆಲಗಳಲ್ಲೂ ಇಡಲಾಗಿದೆ.

ಈ ಫೋಟೊ ಗ್ಯಾಲರಿಯನ್ನು ನೋಡಿದರೆ ಜೈನ ತೀರ್ಥಂಕರರ ಜೀವನಶೈಲಿಯೂ ನಮಗೆ ಮನದಟ್ಟಾಗುತ್ತದೆ. ಇಲ್ಲಿ ಸದುಗದ್ದಲ ವಿಲ್ಲದೆ ಎಲ್ಲೆಲ್ಲೂ ಮೌನದ್ದೇ ಸಾಮ್ರಾಜ್ಯ. ತುಮಕೂರಿನಿಂದ ಹತ್ತು ಕಿ.ಮೀ. ಅಂತರದಲ್ಲಿದೆ.

—ಶಶಿರೇಖಾ ನಾಗೇಂದ್ರ







## ಕಲ್ಲರಳಿ ಕಲೆಯಾಗಿ!

ಸೃಜನಶೀಲ ಮನಸ್ಸು ಹಾಗೂ ಗುಣವಿದ್ದರೆ ಕಲಾಕಾರ ಉತ್ತಮ ಕಲಾಕೃತಿಯನ್ನು ಯಾವ ವಸ್ತುವಿನಿಂದಲಾದರೂ ಸೃಷ್ಟಿಸಬಹುದು.

ಇತ್ತೀಚೆಗೆ ಕೊಡಗಿನ ಕುಶಾಲನಗರ ಸಮೀಪದ ರೆಸಾರ್ಟ್‌ನಲ್ಲಿ ತಂಗಿದ್ದೆ. ಅಲ್ಲಿನ ಉದ್ಯಾನವನದ ಕಲ್ಲಿಗೆ ಹುಲಿಯ ಚಿತ್ರ ಬರೆದು ಅದಕ್ಕೆ ಮೆರಗು ನೀಡಿರುವುದನ್ನು ನೋಡಿ ಆಶ್ಚರ್ಯಪಟ್ಟೆ. ಕಲೆಗಾರ ಆ ಕಲ್ಲಿಗೆ ಹುಲಿಯ ಚಿತ್ರ ಬರೆದು ಉದ್ಯಾನವನದ ಮೆರುಗು ಹೆಚ್ಚಾಗಲು ಕಾರಣವಾಗಿರುವುದು ಮೆಚ್ಚುವ ವಿಷಯ.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ

## ಮನಸೆಳೆಯುವ ಶಿಲೀಂಧ್ರ

ಈ ಚಿತ್ರದಲ್ಲಿ ಕಾಣಿಸುತ್ತಿರುವುದು 'ಸ್ಕಾರ್ಲೆಟ್ ಎಲ್ಫ್ ಕಪ್' ಎಂಬ ಒಂದು ವಿಶಿಷ್ಟ ಹಾಗೂ ಗಮನಸೆಳೆಯುವ ಅರಣ್ಯ ಶಿಲೀಂಧ್ರವಾಗಿದ್ದು, ಅದರ ಪ್ರಕಾಶಮಾನವಾದ ಗುಲಾಬಿ (ಕೆಲವೊಮ್ಮೆ ಒಣಗಿದಾಗ ಕಿತ್ತಳೆ) ಬಣ್ಣದ ರೂಪದಿಂದ ಆಕರ್ಷಿಸುತ್ತದೆ. ಇದರ ಒಳಮೈ ಕಡುಕೆಂಪು ಬಣ್ಣದಿಂದ ಕೂಡಿದೆ. ಇದರ ವೈಜ್ಞಾನಿಕ ಹೆಸರು 'ಸಾರ್ಕೋಸಿಫಾ ಕೊಕಿನಿಯಾ'. ಇದು ಅಸ್ಕೊಮೈಸಿಟ್ಸ್ ಎಂಬ ಶಿಲೀಂಧ್ರಗಳ ಗುಂಪಿಗೆ ಸೇರಿದ್ದು, 'ಅಸ್ಕೈ' ಎಂದು ಕರೆಯುವ ಸೂಕ್ಷ್ಮ ಚೀಲಗಳೊಳಗೆ ಬೀಜಕಗಳನ್ನು ಉತ್ಪಾದಿಸುತ್ತದೆ. ಮಸುಕು ಬೆಳಕಿನಲ್ಲಿ ಇದರ ಉಜ್ವಲ ಬಣ್ಣವು ತಕ್ಷಣವೇ ಗಮನವನ್ನು ಸೆಳೆಯುತ್ತದೆ.

ಇದು ಸಾಮಾನ್ಯವಾಗಿ ಚಳಿಗಾಲದ ಕೊನೆ ಅಥವಾ ವಸಂತ ಕಾಲದ ಆರಂಭದಲ್ಲಿ ಬೆಳೆಯುತ್ತದೆ. ಇದು ತೇವಯುಕ್ತ ಮತ್ತು ನೆರಳಿರುವ ಕಾಡು ಪ್ರದೇಶಗಳಲ್ಲಿ, ವಿಶೇಷವಾಗಿ ಮರಗಳ ಮುರಿದ ಕೊಂಬೆಗಳು ಅದರಲ್ಲೂ ಕೊಳೆತ ಮರದ ಕೊಂಬೆಗಳ ಮೇಲೆ ಬೆಳೆಯುತ್ತದೆ. ಈ ಶಿಲೀಂಧ್ರವು ವಿಷಕಾರಿ ಅಲ್ಲದಿದ್ದರೂ, ಅದರ ಗಟ್ಟಿಯಾದ ರಚನೆ ಮತ್ತು ರುಚಿಯ ಕೊರತೆಯಿಂದಾಗಿ ಆಹಾರವಾಗಿ ಬಳಸುವುದಿಲ್ಲ. ಪುರಾತನ ಕಾಲದಲ್ಲಿ ಇದರ ವಿಚಿತ್ರ ಸೌಂದರ್ಯವು ಜನಪದ ಕಥೆಗಳಿಗೆ ಪ್ರೇರಣೆಯಾಗಿದೆ.



ಇಂದಿಗೂ ಸೌಂದರ್ಯ ಮತ್ತು ಪರಿಸರದ ಮಹತ್ವಕ್ಕಾಗಿ ಸೆಳೆಯಲ್ಪಡುವ ಇದು ಯೂರೋಪ್, ಉತ್ತರ ಅಮೆರಿಕ ಮತ್ತು ಏಷ್ಯಾದ ಕೆಲವು ಭಾಗಗಳಲ್ಲಿ ಸಹಜವಾಗಿ ಕಂಡುಬರುತ್ತದೆ. ತಂಪಾದ ಹವಾಮಾನ ಮತ್ತು ತೇವಯುಕ್ತ ಪರಿಸ್ಥಿತಿಗಳು ಇದರ ಬೆಳವಣಿಗೆಗೆ ಅತ್ಯಂತ ಸೂಕ್ತವಾಗಿವೆ. ಇದರ ಒಳಭಾಗ ಸಾಮಾನ್ಯವಾಗಿ ಮೃದುವಾಗಿದ್ದು, ಹೊರಭಾಗ ಹಗುರವಾದ ಗುಲಾಬಿ ಅಥವಾ ಬಿಳಿ ಬಣ್ಣದ ಕೂದಲುಗಳಿಂದ ಮುಚ್ಚಿರುತ್ತದೆ. ಇದನ್ನು ಹೋಲುವ ಮತ್ತೊಂದು ಪ್ರಭೇದವಾದ 'ಸಾರ್ಕೋಸಿಫಾ ಆಸ್ಟ್ರಿಯಾಕಾ' ಮತ್ತು ಇದರ ನಡುವಿನ ಭಿನ್ನತೆಯನ್ನು ಸೂಕ್ಷ್ಮದರ್ಶಕದಿಂದ ಮಾತ್ರ ಗುರುತಿಸಲು ಸಾಧ್ಯ.

ಇದು ಹಿಮ ಕರಗುವ ಸಮಯದಲ್ಲಿ ಕಾಡಿಗೆ ಕಳೆಗಟ್ಟುವ ಬಣ್ಣವನ್ನು ತುಂಬುವ ಕಾರಣ ಫೋಟೊಗ್ರಾಫರ್‌ಗಳು ಮತ್ತು ಪ್ರಕೃತಿ ವೀಕ್ಷಕರಿಗೆ ಇದು ಬಹಳ ಇಷ್ಟ. ಜೊತೆಗೆ ಅರಣ್ಯ ಪರಿಸರದ ಆರೋಗ್ಯವನ್ನು ಸೂಚಿಸುವ ಸೂಚಕ ಜೀವಿಯಾಗಿಯೂ ಇದನ್ನು ಪರಿಗಣಿಸಲಾಗುತ್ತದೆ.

ಡಾ. ಮೈತ್ರಿ ಭಟ್, ವಿಟ್ಲ